

# ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಮಿಷ್ ಆದ್ದು. [ನಂ. 35.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ|| 3, ಸ್ 1903.

## IIನೇ ಭಾಗ.

### ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಇನಾಂ ಇಲಾಖೆ.

ಇಸ್ತಿಹಾರ್‌ನಾಮೆ.

ನಂಬರು—1. ತಾರೀಖು 15ನೆ ಆಗಸ್ಟ್ 1903ನೆ ಇಸವಿ.

ಇನಾಂದಾರ್ರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟ್ ದೇವನಹಳ್ಳಿ ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು ಫೈನಲ್ ಟೈಟಲ್‌ಡೀಡ್ ಯಾನೆ ಖಾಯಂ ಪಟ್ಟೆಗಳು (1479) ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷರ್ ಸಾಹೇಬರವರ ಬಳಿಗೆ ಬಟವಾಡೆ ಬಗ್ಯೆ ಕಳುಹಿಸಲ್ಪಟ್ಟಿವೆ.

2. ಸದರಿ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ, ಪ್ರತ್ಯೇಕ, ನೋಟೀಸುಗಳು ಬಂದಮೇಲೆ ಅವುಗಳನ್ನು (ಪಟ್ಟೆಗಳನ್ನು) ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರ್ರುಗಳು ಏರ್ಪಡ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸುಗಳನ್ನು ದೇರ ಮಾಡದೆ ಕೊಡತಕ್ಕದ್ದೆಂದು ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರಿ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟಲ್‌ಮೆಂಟ್ಸ್.